Committee meeting and took member's suggestions. ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಅಪ್ಲಿಕೇಷನ್ ಫಾರಮ್‌ನಲ್ಲಿ ಸೀರಿಯಲ್ ನಂಬರ್ ಇಲ್ಲ, ರೆವಿನ್ಯೂ ಡಿಪಾರ್ಟ್‌ಮೆಂಟ್ ಸೀಲ್ ಇಲ್ಲ, ಮತ್ತು ಕನ್‌ಸರ್ನ್ಡ್ ಪರ್ಸನ್ ಸಿಗ್ನೇಚರ್ ಇಲ್ಲ. When our Hon. Chief Minister visited Mysore, this was brought to his notice also. He also replied that it was wrong. ಆದರೆ ಅದು ಕೆಲಸ ಆಗಲಿಲ್ಲ. ಮತ್ತೆ ಏನಾಗಿದೆ ಎಂದರೆ.....the enumeration work is not completed.

ಅಧ್ಯಕ್ಷರು.—ನಿಮಗೆ ಏನಾಗಬೇಕು ಅದನ್ನು ಹೇಳಿ ?

ಶ್ರೀಮತಿ ಮುಬ್ತಾರುನ್ನೀಸಾ.—ಅದೇ ಕೇಳುತ್ತಿದ್ದೇನೆ. ನಮಗೆ ಏನಾಗಬೇಕೆಂದು ಕೇಳುತ್ತಿದ್ದೇನೆ, ನಾನೂ ಕೂಡಾ ಅದಕ್ಕೆ ಮೆಂಬರ್ ಇದ್ದೇನೆ, ನಮ್ಮ ಮಿತ್ರರಾದ ಹೆಮ್ಮಿಗೆಯವರೂ ಮೆಂಬರ್ ಆಗಿದ್ದಾರೆ. ಇಲ್ಲಿ ಎನ್ಯುಮರೇಷನ್ ವರ್ಕ್ ಕಂಪ್ಲೀಟೆಡ್ ಎಂದು ಇದೆ, ಆದರೆ ಇದುವರೆಗೆ ಒಂದು ಮಿಟಿಂಗ್ ಆಗಲಿಲ್ಲ. ಇದು ೧೨ ವರ್ಷದಿಂದಲೂ ಆನ್ ಆಥರೈಸ್ಡ್ ಲೇಔಟ್ ಎಂದು ಇದೆ. ನನ್ನ ಎರಡನೆಯ ಪ್ರಶ್ನೆಗೆ ಏನು ಹೇಳಿದ್ದಾರೆ ಎಂದರೆ the layout is expected to be completed by 31-3-87. ಈ ವರ್ಕ್ ಕೂಡಾ ಕಂಪ್ಲೀಟ್ ಆಗಲಿಲ್ಲ. ಮೊನ್ನೆ ನಮ್ಮ ಮಂತ್ರಿಯವರು ಆ ಜನರಿಗೆ ಕಾಂಪನ್‌ಸೇಷನ್ ಕೊಡುವುದಿಲ್ಲ, ಬೇರೆ ಜಾಗ ಕೊಡೋಣ, ಜನಶ್ರೀ ನಗರ ಮತ್ತು ಕುವೆಂಪು ನಗರದವರಿಗೆ ರೆಗ್ಯುಲರೈಸ್ ಮಾಡುತ್ತೇನೆಂದು ಹೇಳಿದ್ದಾರೆ. ಇದು ನನಗೆ ಗೊತ್ತಿಲ್ಲ ಅದಕ್ಕೋಸ್ಕರ ಕೇಳುತ್ತಿದ್ದೇನೆ. ಆ ಲೇಔಟ್‌ನಲ್ಲಿ ಬಹಳ ತೊಂದರೆ ಇದೆ, ಅಲ್ಲಿ ಎಲೆಕ್ಟ್ರಿಸಿಟಿ ಇಲ್ಲ, ವಾಟರ್ ಇಲ್ಲ, ಕೇಳಿದರೆ ಲೇಔಟ್ ಕಾರ್ಪೊರೇಷನ್‌ಗೆ ಸೇರಿಲ್ಲ, ಆದುದರಿಂದ ಎಲೆಕ್ಟ್ರಿಸಿಟಿ, ವಾಟರ್ ಕೊಡುವುದಿಲ್ಲ ಎಂದು ಹೇಳಿದ್ದಾರೆ, ಬಹಳ ತೊಂದರೆ ಇದೆ ಸ್ವಾಮಿ, ಅದಕ್ಕೋಸ್ಕರ ಕೇಳುತ್ತಿದ್ದೇನೆ.

ಶ್ರೀ ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಈ ಕೆಲಸ ಮಾಡುವುದಕ್ಕೆ ಒಂದು ಸಮಿತಿಯನ್ನು ಸರಕಾರ ನೇಮಕ ಮಾಡಿದೆ, ಆ ಸಮಿತಿಯಲ್ಲಿ ಸನ್ಮಾನ್ಯ ಸದಸ್ಯರೂ ಇದ್ದಾರೆ.....

ಅಧ್ಯಕ್ಷರು.—ಅವರು ಮಿಟಿಂಗೇ ಕರೆದಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಿಟಿಂಗ್ ಕರೆದು ಅವರಿಗೆ ವಿವರ ಕೊಡುವಂತೆ ಹೇಳುತ್ತೇನೆ.

ಶ್ರೀಮತಿ ಮುಬ್ತಾರುನ್ನೀಸಾ.—ಈ ಫಾರಂನಲ್ಲಿ ಸೀಲ್ ಇಲ್ಲ, ಸೈನ್ ಇಲ್ಲ, ಸೀರಿಯಲ್ ನಂಬರ್ ಇಲ್ಲ.....

ಶ್ರೀ ಎ. ಲಕ್ಷ್ಮೀಸಾಗರ್.—ಸೀಲ್ ಇಲ್ಲ ಎಂದು ಹೇಳಿದರೆ.....

ಅಧ್ಯಕ್ಷರು.—ಮಿಟಿಂಗ್ ಕರೆಯುವುದಕ್ಕೆ ಡೈರೆಕ್ಷನ್ ಕೊಡುತ್ತೀರಿ ಅಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಆಯಿತು ಸ್ವಾಮಿ.

ರಾಣೆಬೆನ್ನೂರು ನಗರದಲ್ಲಿ ಓವರ್‌ಹೆಡ್ ಟ್ಯಾಂಕ್ ಕಟ್ಟಿಸುವ ಬಗ್ಗೆ

೧೬೭ (೧೯೧) ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಣೆಬೆನ್ನೂರು ನಗರದಲ್ಲಿ ಓವರ್ ಹೆಡ್ ಟ್ಯಾಂಕ್ ಕಟ್ಟಿಸುವ ಕೆಲಸ ಸ್ಥಗಿತಗೊಂಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಇ) ಈ ಕೆಲಸವನ್ನು ಯಾವಾಗ ಪುನಹ ಪ್ರಾರಂಭಿಸಲಾಗುವುದು ?

ಪ್ರೊ|| ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು, ಸಂಸದೀಯ ವ್ಯವಹಾರ ಮಂತ್ರಿಗಳು).—

ಅ) ಬಂದಿದೆ.

ಆ) ಈ ಕೆಲಸಕ್ಕೆ ಬೇಕಾದ ಪೂರ್ಣ ಹಣವನ್ನು ಪುರಸಭೆಯವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಪಾವತಿ ಮಾಡಿಲ್ಲ. ಆದ್ದರಿಂದ ಕೆಲಸ ಸ್ಥಗಿತಗೊಂಡಿದೆ.

ಇ) ಕೆಲಸಕ್ಕೆ ಬೇಕಾದ ಪೂರ್ಣ ಹಣವನ್ನು ಪುರಸಭೆಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಪಾವತಿ ಮಾಡಿದ ನಂತರ ಈ ಕೆಲಸವನ್ನು ಮಂಡಲಿಯು ಪ್ರಾರಂಭಿಸುವುದು.

ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ ಅಲ್ಲಿ ಕೆಲಸ ಸ್ಥಗಿತವಾಗಿದೆಯೆಂದು ಮಾನ್ಯ ಮಂತ್ರಿಗಳ ಉತ್ತರದಲ್ಲಿ ಹೇಳಿದ್ದಾರೆ ಆದರೆ ಅಲ್ಲಿ ಇನ್ನೂ ಕೆಲಸ ಪ್ರಾರಂಭವಾಗಿಯೇ ಇಲ್ಲ. ನಗರ ಸಭೆಯವರು ಸುಮಾರು ೫ ಲಕ್ಷ ರೂಪಾಯಿಗಳ ಹಣವನ್ನು ಒಳಚರಂಡಿ ಮಂಡಲಿಯವರಿಗೆ ಕೊಟ್ಟಿದ್ದಾರೆ. ಆದರೆ ಇತ್ತೀಚೆಗೆ ನನಗೆ ತಿಳಿದ ಒಂದು ಪರ್ತಮಾನದ ಪ್ರಕಾರ ಒಳಚರಂಡಿ ಮಂಡಲಿಯವರು ಒಂದು ರಸಲ್ಯೂಷನ್ ಮಾಡಿದ್ದಾರಂತೆ. ಆ ರೆಸಲ್ಯೂಷನ್ ಏನೆಂದರೆ ನೂರಕ್ಕೆ ನೂರರಷ್ಟು ಹಣವನ್ನು ಕಟ್ಟಿದರೆ ಮಾತ್ರ ಕೆಲಸ ಪ್ರಾರಂಭ ಮಾಡಬೇಕು ಇಲ್ಲದಿದ್ದರೆ ಬೇಡವೆಂದು. ಆದರೆ ನನಗೆ ತಿಳಿದ ಮಟ್ಟಿಗೆ ಪುರಸಭೆಯು ಒಂದು ಭಾಗದಷ್ಟು ಹಣವನ್ನು ಕೊಟ್ಟರೆ ಆ ಕೆಲಸವನ್ನು ಮಂಜೂರು ಮಾಡಬೇಕೆಂದು, ಆಡಳಿತಾತ್ಮಕ ಅನುಮೋದನೆಯನ್ನು ಕೊಡಬೇಕೆನ್ನುವ ರೂಪರೇಷೆಗಳು ಇವೆ. ಆದ್ದರಿಂದ ಇನ್ನು ಒಂದು ತಿಂಗಳೊಳಗಾಗಿ ನಾವು ೫ ಲಕ್ಷ ರೂಪಾಯಿಗಳ ಹಣವನ್ನು ಒಳಚರಂಡಿ ಮಂಡಲಿಯವರಿಗೆ ತುಂಬುತ್ತೇವೆ. ಕೂಡಲೇ ಅಲ್ಲಿ ಕೆಲಸ ಪ್ರಾರಂಭಿಸುವಂತೆ ಆಜ್ಞಾಪನೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈ ಒಂದು ನೀರು ಸರಬರಾಜು ಮಾಡತಕ್ಕಂಥ ಕೆಲಸಕ್ಕೆ ಸುಮಾರು ೨೩ ಲಕ್ಷ ೩೦ ಸಾವಿರ ರೂಪಾಯಿಗಳ ಹಣ ಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳುವ ಪ್ರಕಾರ ಪುರಸಭೆಯಿಂದ ನಮಗೆ ಹಣ ಬರಬೇಕಾಗುತ್ತದೆ. ಅವರು ಬರೀ ೫ ಲಕ್ಷ ರೂಪಾಯಿಗಳನ್ನು ಒಳಚರಂಡಿ ಮಂಡಲಿಗೆ ತುಂಬಿದರೆ ನಾವು ಕೆಲಸ ಪ್ರಾರಂಭ ಮಾಡಿಸುವುದಕ್ಕೆ ಆಗುವುದಿಲ್ಲ. ನಾವು ಕೆಲಸ ಪ್ರಾರಂಭ ಮಾಡಬೇಕಾದರೆ ಆ ಕೆಲಸವನ್ನು ಗುತ್ತಿಗೆದಾರರಿಗೆ ಮಹಿಸಿಕೊಡಬೇಕಾಗುತ್ತದೆ. ಹಣ ನಮಗೆ ಬರುವಂತಹ ಚಿನ್ಹೆಯೇ ಇಲ್ಲದೆ ನಾವು ಯಾವ ರೀತಿ ಕಂಟ್ರಾಕ್ಟ್‌ದಾರರಿಗೆ ಆ ಕೆಲಸವನ್ನು ಮಹಿಸುವುದು ? ಮಾನ್ಯ ಸದಸ್ಯರು ವಕೀಲರು ಅವರಿಗೆ ಎಲ್ಲಾ ವಿಚಾರ ಗೊತ್ತಿದೆ.

ಶ್ರೀ ಕೆ.ಬಿ. ಕೋಳಿವಾಡ್.— ಮಾನ್ಯ ಅಧ್ಯಕ್ಷರೇ ಈ ಯೋಜನೆಯ ಅಂದಾಜು ಹಿಂದೆ ೧೨ ಲಕ್ಷ ರೂಪಾಯಿಗಳು ಮಾತ್ರ ಇತ್ತು. ಈಗ ಕಾಸ್ಟ್ ಚಾಪ್ಟಿಯಾಗಿ ಅದರ ಅಂದಾಜು ಯೋಜನೆ ಸುಮಾರು ೨೩ ಲಕ್ಷ ೩೦ ಸಾವಿರ ರೂಪಾಯಿಗಳಷ್ಟರಲ್ಲಿವಿಗೂ ಹೋಗಿದೆ. ನಾವು ಡಿಲೇ ಮಾಡಿದಷ್ಟು ಅಂದಾಜು ಬೆಲ್ಟ್ ಚಾಪ್ಟಿಯಾಗುತ್ತಾ ಹೋಗುತ್ತದೆ. ಈಗಾಗಲೇ ನಾವು ೫ ಲಕ್ಷ ರೂಪಾಯಿಗಳನ್ನು ತುಂಬಿದ್ದೇವೆ. ಇನ್ನು ಒಂದು ತಿಂಗಳೊಳಗಾಗಿ ೫ ಲಕ್ಷ ರೂಪಾಯಿಗಳನ್ನು ತುಂಬುತ್ತೇವೆ. ಆಷ್ಟು ಬೇಗ ಆ ಕೆಲಸವನ್ನು ಪ್ರಾರಂಭ ಮಾಡುತ್ತೀರಾ ?

ಅಧ್ಯಕ್ಷರು.—ಅವರು ಹಣ ಕೊಡುತ್ತಾರಂತೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಹಣ ಕೊಡಲಿ ಆಮೇಲೆ ನಾನು ಮುಂದಿನ ಕ್ರಮ ತೆಗೆದು ಕೊಳ್ಳುತ್ತೇನೆ.

ಹರಿಜನ ಹಾಗೂ ಗಿರಿಜನ ಕೇರಿಗಳಲ್ಲಿ ಕೊರೆಯಲಾದ ಕೊಳವೆ ಬಾವಿಗಳು

೧೬೮ (೨೬೨೩) ಶ್ರೀ ಟಿ. ಸಿ. ಮಾನಿಸ್ವಾಮಯ್ಯ (ದೇವನಹಳ್ಳಿ).—ಮಾನ್ಯ ಗಾಮೀಣಾಭಿವೃದ್ಧಿ, ಪಶು ಪಾಲನಾ ಹಾಗೂ ಪಶು ಸಂಪತ್ತು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

೧) ರಾಜ್ಯದಲ್ಲಿ ಇದುವರೆವಿಗೂ ಕೊಡಿಯಲಾದ ನೀರಿಗೊಸ್ಕರ ಪಾಕಿರುವ ಕೊಳವೆ ಬಾವಿಗಳೆಷ್ಟು ?

೨) ಇವುಗಳಲ್ಲಿ ಹರಿಜನ ಗಿರಿಜನ ಕೇರಿಗಳಲ್ಲಿ ಪಾಕಿರುವ ಕೊಳವೆ ಬಾವಿಗಳೆಷ್ಟು ?